# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1369(1617) |
| ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19.12.2025 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ.ಸ. | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ 05 ವರ್ಷಗಳಿಂದ ಇಲ್ಲಿಯವರೆಗೂ ಸಮಾಜ ಕಲ್ಯಾಣ ಇಲಾಖೆಯಲ್ಲಿ ವಿದ್ಯಾರ್ಥಿಗಳಿಗಾಗಿ ಪರೀಕ್ಷಾ ತರಬೇತಿಗೆಂದು ಎಷ್ಟು ಹಣವನ್ನು ಖರ್ಚು ಮಾಡಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | 2019-20, 2021-22, 2022-23, 2023-24 ಮತ್ತು 2024-25ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ವಿದ್ಯಾರ್ಥಿಗಳ ಪರೀಕ್ಷಾ ತರಬೇತಿಗಾಗಿ ಖರ್ಚು ಮಾಡಿರುವ ಮೊತ್ತದ ವಿವರಗಳನ್ನು ಜಿಲ್ಲಾವಾರು ಅನುಬಂಧ-1, 1(a) ಮತ್ತು 1(b)ರಲ್ಲಿ ಒದಗಿಸಲಾಗಿದೆ. 2020-21 ನೇ ಸಾಲಿನಲ್ಲಿ ಕೋವಿಡ್ -19 ಕಾರಣಕ್ಕಾಗಿ ತರಬೇತಿಗಳು ನಡೆದಿರುವುದಿಲ್ಲ. |
| ಆ | ತರಬೇತಿ ನೀಡಲಾಗುವ ಸಂಸ್ಥೆಗಳನ್ನು ಯಾವ ನಿಯಮದಡಿಯಲ್ಲಿ ಆಯ್ಕೆ ಮಾಡಿಕೊಳ್ಳಲಾಗುವುದು; ಸರ್ಕಾರ ವಿಧಿಸಿರುವ ಮಾನದಂಡವೇನು? | ತರಬೇತಿ ನೀಡಲಾಗುವ ಸಂಸ್ಥೆಗಳನ್ನು KPPP ನಿಯಮದಡಿಯಲ್ಲಿ ನಿರ್ದಿಷ್ಟ ತರಬೇತಿಗೆ ಅವಶ್ಯವಿರುವ ಮಾನದಂಡಗಳನ್ನು ಅಳವಡಿಸಿ (Technical Criteria) ಇ-ಟೆಂಡರ್‌ಗಳನ್ನು ಆಹ್ವಾನಿಸಿ, ನಿಯಮಾನುಸಾರ ಆಯ್ಕೆ ಮಾಡಲಾಗುತ್ತದೆ<br>ಮುಂದುವರೆದು, ನವದೆಹಲಿ, ಹೈದರಾಬಾದ್, ಬೆಂಗಳೂರು ಹಾಗೂ ಕರ್ನಾಟಕದ ಇತರೆ ಭಾಗಗಳಲ್ಲಿರುವ ನುರಿತ ತರಬೇತಿ ಸಂಸ್ಥೆಗಳು ಹೊಂದಿರುವ ಅನುಭವ, ಆರ್ಥಿಕ ಸಾಮಾರ್ಥ್ಯ, ತರಬೇತಿ ಸಂಸ್ಥೆಗಳ ಫಲಿತಾಂಶ, ಅಧ್ಯಾಪಕರ ಅನುಭವ, ಇನ್ನಿತರ ಮಾನದಂಡಗಳನ್ನು ಟೆಂಡರ್‌ಗಳಲ್ಲಿ ಪರಿಗಣಿಸಲಾಗಿರುತ್ತದೆ. |
| ಇ | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಅರ್ಹ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿಗೆಂದು ನಿಗಧಿಪಡಿಸಿದ ಕೋಟ್ಯಾಂತರ ರೂಪಾಯಿಗಳ ಟೆಂಡರ್‌ನ್ನು ನುರಿತ ತರಬೇತಿ ಸಂಸ್ಥೆಗೆ ನೀಡದೇ ಟೆಂಡರ್‌ನಲ್ಲಿ ಎಲ್-1 ಆಗಿದ್ದ ಕಡಿಮೆ ಗುಣಮಟ್ಟದ ತರಬೇತಿ ಸಂಸ್ಥೆಗೆ ಟೆಂಡರ್ ನೀಡಲಾಗಿದೆಯೇ? | ಹಿಂದಿನ ಸಾಲಿನಿಂದಲೂ IGCCD ಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ವಿವಿಧ ಸ್ಪರ್ಧಾತ್ಮ ಪರೀಕ್ಷೆಗಳಿಗೆ ಉತ್ತಮ ತರಬೇತಿ ನೀಡುವ ನಿಟ್ಟಿನಲ್ಲಿ ಇ-ಟೆಂಡರ್‌ಗಳನ್ನು ಕರೆದು, ದೇಶಾದ್ಯಂತ ಸಂಸ್ಥೆಗಳನ್ನು ಟೆಂಡರ್ ಮೂಲಕ ಆಯ್ಕೆ ಮಾಡಿ ಆಯ್ಕೆಯಾದ ನುರಿತ ಸಂಸ್ಥೆಗಳನ್ನು ಸರ್ಕಾರವು ಎಂಪಾನಲ್ ಮಾಡಿ ಆದೇಶಿಸಲಾಗುತ್ತದೆ. ಎಂಪಾನಲ್ ಮಾಡಿರುವ ಸಂಸ್ಥೆಗಳಲ್ಲಿ ಅರ್ಹ ಅಭ್ಯರ್ಥಿಗಳು ತಮಗೆ ಇಚ್ಛೆಯುಳ್ಳ ತರಬೇತಿ ಸಂಸ್ಥೆಗಳನ್ನು ಕೌನ್ಸಲಿಂಗ್ ಮೂಲಕ ತಾವೇ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ. ಹಲವಾರು ಅಭ್ಯರ್ಥಿಗಳು ಸದರಿ ಯೋಜನೆಯ ಪ್ರಯೋಜನವನ್ನು ಪಡೆದಿರುತ್ತಾರೆ.<br>ಮುಂದುವರೆದು, ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 951 ವೆಚ್ಚ -12/2024 ದಿನಾಂಕ: |

| | | |
|---|---|---|
| | | 16.01.2025ರಲ್ಲಿ ರಾಜ್ಯದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ಕಡ್ಡಾಯವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ನಲ್ಲಿ letter of intent ನೀಡುವಂತೆ ಹಾಗೂ ಎಲ್1 ಟೆಂಡರ್ ದಾರರಿಗೆ ಕಾರ್ಯದೇಶ /ಸರಬರಾಜು ಆದೇಶ ನೀಡುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳುಮ 2000ರ ನಿಯಮ 25 ರಂತೆ ಸರಕು ಮತ್ತು ಸೇವೆಗಳ ಸಂಗ್ರಹಣೆಗಾಗಿ ಆಹ್ವಾನಿಸಲಾಗಿರುವ ಟೆಂಡರ್‌ಗಳಲ್ಲಿ ಮೌಲ್ಯಮಾಪನ ಮಾಡಿದ ಅತಿ ಕಡಿಮೆ ದರವನ್ನು (ಎಲ್1) ಮಾತ್ರ ಅಂಗೀಕರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ, ಕಳೆದ ಸಾಲಿನಲ್ಲಿ ಕೆಲವು ವಸತಿಯುತ ತರಬೇತಿಗಳಿಗೆ ಮಾತ್ರ KPPP ನಿಯಮಾನುಸಾರ ವಿಭಾಗ ಮಟ್ಟದಲ್ಲಿ ಎಲ್-1 ಆಗಿದ್ದ ನುರಿತ ತರಬೇತಿ ಸಂಸ್ಥೆಗೆ ಟೆಂಡರ್ ನೀಡಲಾಗಿರುತ್ತದೆ. ತರಬೇತಿ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದಿರುತ್ತವೆ. |
| ಈ | ಡಾ. ಬಾಬು ಜಗಜೀವನ್‌ರಾಂ ಭವನ (ಸುಮ್ಮನಹಳ್ಳಿ) ಹಾಗೂ ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಸುಸಜ್ಜಿತ ತರಬೇತಿ ಕೇಂದ್ರಗಳ ಸೌಲಭ್ಯಗಳಿದ್ದರೂ ಸಹ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಖಾಸಗಿ ಸಂಸ್ಥೆಗಳಿಗೆ ತರಬೇತಿ ನೀಡುವ ಜವಾಬ್ದಾರಿ ನೀಡುವ ಉದ್ದೇಶವೇನು? | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ದೇಶ್ಯಾದ್ಯಂತ ಅಂದರೆ ದೆಹಲಿ, ಹೈದರಾಬಾದ್, ಬೆಂಗಳೂರು ಹಾಗೂ ಕರ್ನಾಟಕದ ಇತರೆ ಭಾಗಗಳಲ್ಲಿ ಉತ್ತಮವಾದ ತರಬೇತಿ ಸಂಸ್ಥೆಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಾದ IAS,KAS, BANKING ಇಂತಹ ಕಠಿಣವಾದ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕೆಂಬ ಒಳ್ಳೆಯ ಉದ್ದೇಶದಿಂದ ಅಭ್ಯರ್ಥಿಗಳಿಗೆ ನುರಿತ ತರಬೇತಿ ಸಂಸ್ಥೆಗಳಿಗೆ ಅಭ್ಯರ್ಥಿಗಳನ್ನು ಮೆರಿಟ್ ಹಾಗೂ ತಮ್ಮ ಇಚ್ಛೆಯ ಅನುಸಾರ ಅಭ್ಯರ್ಥಿಗಳನ್ನು ನಿಯೋಜಿಸಲಾಗುತ್ತದೆ. ಹಲವಾರು ಅಭ್ಯರ್ಥಿಗಳು ಸದರಿ ಯೋಜನೆಯ ಪ್ರಯೋಜನವನ್ನು ಪಡೆದು, ಉನ್ನತ ಸ್ಥಾನಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>ಮುಂದುವರೆದು, ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಯಾವುದೇ ಸುಸಜ್ಜಿತ ತರಬೇತಿ ಸೌಲಭ್ಯವಿರುವುದಿಲ್ಲ. ಆದರೆ ಇಂದಿರಾ ಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರವು ಇತ್ತೀಚೆಗೆ ಡಾ. ಬಾಬು ಜಗಜೀವನ್‌ರಾಂ ಭವನ (ಸುಮ್ಮನಹಳ್ಳಿ) ಇಲ್ಲಿಗೆ ಸ್ಥಳಾಂತರಗೊಂಡಿದ್ದು, ಮುಂದಿನ ದಿನಗಳಲ್ಲಿ ತರಬೇತಿ ನೀಡಲು ಬೇಕಾಗುವ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಂಡು ತರಬೇತಿ ಕಾರ್ಯ್ರಕಮಗಳನ್ನು ಪ್ರಾರಂಭಿಸುವ ಕುರಿತು ಪರಿಶೀಲಿಸಲಾಗುವುದು. |

**ಸಂಖ್ಯೆ:ಸಕಇ 968 ಪಕವಿ 2025**

**(ಡಾ. ಹೆಚ್.ಸಿ. ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

## ಅನುಬಂಧ-1

(ರೂ. ಲಕ್ಷಗಳಲ್ಲಿ)

| ವರ್ಷ | ಕೋರ್ಸ್ | ವಿದ್ಯಾರ್ಥಿಗಳ ಸಂಖ್ಯೆ | ಖರ್ಚು |
|---|---|---|---|
| 2019-20 | Upsc | 587 | 873.02 |
| 2021-22 | | 481 | 510.00 |
| 2022-23 | | 587 | 338.19 |
| 2023-24 | | 781 | 1392.20 |
| 2024-25 | | 400 | 930.77 |
| 2019-20 | KAS | 546 | 873.02 |
| 2021-22 | | 626 | 340 |
| 2022-23 | | 595 | 330.22 |
| 2023-24 | | 585 | 585.00 |
| 2024-25 | | - | - |
| 2019-20 | Others (Group c, SSC, RRB, Banking) | 1683 | 604.45 |
| 2021-22 | | 1807 | 1301.00 |
| 2022-23 | | 5134 | 1120.76 |
| 2023-24 | | 2615 | 1176.75 |
| 2024-25 | | - | - |
| 2024-25 | PSI | 1400 | 1800.42 |
| 2024-25 | PC | 1200 | 959.64 |
| 2024-25 | Integrated (Degree with Competitive exam coaching 3years) | 100 | 300.00 |

# ಅನುಬಂಧ 1 (b)

| Sl. No | District | 2045-25 | | | |
|---|---|---|---|---|---|
| | | PSI | Expenditure (in Lacs) | Police Constable | Expenditure (in Lacs) |
| 1 | Bagalkote | 146 | 187.76 | 81 | 64.78 |
| 2 | Ballari | 31 | 39.87 | 19 | 15.19 |
| 3 | Belagavi | 123 | 158.18 | 141 | 112.76 |
| 4 | Bengaluru Rural | 9 | 11.57 | 16 | 12.8 |
| 5 | Bengaluru Urban | 28 | 36.01 | 43 | 34.39 |
| 6 | Bidar | 22 | 28.29 | 28 | 22.39 |
| 7 | Chamarajanagara | 29 | 37.29 | 15 | 12 |
| 8 | Chikkaballapura | 18 | 23.15 | 13 | 10.4 |
| 9 | Chikkamagaluru | 11 | 14.15 | 4 | 3.2 |
| 10 | Chitradurga | 28 | 36.01 | 61 | 48.78 |
| 11 | Dakshina Kannada | 3 | 3.86 | 3 | 2.4 |
| 12 | Davanagere | 31 | 39.87 | 81 | 64.78 |
| 13 | Dharwada | 20 | 25.72 | 18 | 14.39 |
| 14 | Gadaga | 24 | 30.86 | 33 | 26.39 |
| 15 | Hassan | 27 | 34.72 | 6 | 4.8 |
| 16 | Haveri | 57 | 73.3 | 32 | 25.59 |
| 17 | Kalaburagi | 132 | 169.75 | 94 | 75.17 |
| 18 | Kodagu | 1 | 1.29 | 0 | 0 |
| 19 | Kolar | 28 | 36.01 | 21 | 16.79 |
| 20 | Koppala | 67 | 86.16 | 37 | 29.59 |
| 21 | Mandya | 14 | 18 | 5 | 4 |
| 22 | Mysuru | 54 | 69.44 | 14 | 11.2 |
| 23 | Raichuru | 169 | 217.34 | 86 | 68.77 |
| 24 | Ramanagara | 26 | 33.44 | 23 | 18.39 |
| 25 | Shivamogga | 22 | 28.29 | 62 | 49.58 |
| 26 | Tumakuru | 21 | 27.01 | 46 | 36.79 |
| 27 | Udupi | 0 | 0 | 0 | 0 |
| 28 | Uttara Kannada | 6 | 7.72 | 10 | 8 |
| 29 | Vijayanagara | 90 | 115.74 | 55 | 43.98 |
| 30 | Vijayapura | 96 | 123.46 | 102 | 81.57 |
| 31 | Yadagiri | 67 | 86.16 | 51 | 40.78 |
| | Total | 1400 | 1800.42 | 1200 | 959.64 |